# ಉತ್ತಿದ ಹೊಲದಿಂದ ರಾಣಿಯ ಉರಿನೆಲಕೆ




**ಸ್ವೀಟಿ ಬೂರಾ ಎರಡೇ ವರ್ಷಗಳ ಹಿಂದೆ ವಿಶ್ವ ಚಾಂಪಿಯನ್ ಬಾಕ್ಸರ್ ಆಗಿದ್ದವರು. ಅದಕ್ಕೂ ಕೆಲವು ತಿಂಗಳ ಹಿಂದೆಯಷ್ಟೇ ಅವರು ವಿವಾಹ ಬಂಧನಕ್ಕೆ ಒಳಗಾಗಿದ್ದರು. ಈಗ ಅವರು ತಮ್ಮ ಪತಿ, ಕಬಡ್ಡಿ ಆಟಗಾರ ದೀಪಕ್ ಹೂಡಾ ಮೇಲೆ ವರದಕ್ಷಿಣೆ ಪ್ರಕರಣ ದಾಖಲಿಸಿದ್ದಾರೆ. ರಾಜಕೀಯ ಕ್ಷೇತ್ರಕ್ಕೆ ಇಬ್ಬರೂ ಪ್ರವೇಶಿಸಿದ ಕೆಲವೇ ಕಾಲದ ನಂತರ ಸಂಬಂಧದಲ್ಲಿ ಈ ಬಿರುಕು ಕಾಣಿಸಿಕೊಂಡಿದೆ.**

**■ ವಿಶಾಖ ಎನ್.**

ಸ್ಪೋರ್ಟ್ಸ್ ಅಥಾರಿಟಿ ಆಫ್ ಇಂಡಿಯಾ ಅರ್ಥಾತ್ ಭಾರತೀಯ ಕ್ರೀಡಾ ಪ್ರಾಧಿಕಾರ ಅರ್ಥಾತ್ 'ಸಾಯಿ' ಆವರಣದಲ್ಲಿ ಒಂದು ಬಾಕ್ಸಿಂಗ್ ಸ್ಪರ್ಧೆ. ಅದಾಗಲೇ ಸಾಕಷ್ಟು ಸ್ಪರ್ಧೆಗಳಲ್ಲಿ ಸೆಣಸಿ ಹುರಿಗೊಂಡಿದ್ದ ನುರಿತರೊಬ್ಬರು ಒಂದೆಡೆ. ಅಲ್ಲಿ ಕಲಿಕೆಗೆ ಅವಕಾಶ ಕೋರಿಕೊಂಡು ಬಂದಿದ್ದ ಯುವತಿ ಇನ್ನೊಂದೆಡೆ.

ಮೊದಲ ಸುತ್ತಿನ ಸ್ಪರ್ಧೆ ಶುರುವಾಯಿತಷ್ಟೆ. ಏನಾಗುತ್ತಿದೆ ಎಂದು ಅಂದಾಜಾಗುವ ಹೊತ್ತಿಗೆ ಮುಖದ ಎಲ್ಲ ಸ್ನಾಯುಗಳೂ ನೋಯಲಾರಂಭಿಸಿದವು. ಅವಕಾಶ ಕೋರಿ ಹೋಗಿದ್ದ ಯುವತಿಗೆ ತನ್ನ ಮೂಳೆಗಳು ಮುರಿದುಹೋದವೇನೊ ಎನ್ನುವ ಅನುಮಾನವೂ ಆ ಕ್ಷಣ ಕಾಡಲಾರಂಭಿಸಿತು. ಅಷ್ಟು ಜೋರಾಗಿ ಅನುಭವಿಯಿಂದ ಪಂಚ್‌ಗಳು ಬಿದ್ದಿದ್ದವು. ಇನ್ನೊಂದು ಸುತ್ತಿಗೆ ಮುಂಚಿನ ಬಿಡುವಿನಲ್ಲಿ ಹತ್ತಿರಕ್ಕೆ ಬಂದ ಸಹೋದರ, 'ಆಯಿತಾ ನಿನ್ನ ಬಾಕ್ಸಿಂಗ್? ಒದೆ ತಿಂದು ಬಂದೆಯಲ್ಲ' ಎಂದು ಗಾಯದ ಮೇಲೆ ಉಪ್ಪು ಸವರಿದ.




ಅದೆಲ್ಲಿತ್ತೋ ಕೆಚ್ಚು, ಎರಡನೇ ಸುತ್ತಿನಲ್ಲಿ ಎಲ್ಲ ಸಾಮರ್ಥ್ಯವನ್ನು ಒಗ್ಗೂಡಿಸಿಕೊಂಡವಳಂತೆ ಯುವತಿ ಎದುರಾಳಿಗೆ ಉತ್ತರ ಕೊಡಲಾರಂಭಿಸಿದಳು. 'ಅಪ್ಪರ್ ಕಟ್' ಮೂಲಕ ಪರಿಣತ ಸ್ಪರ್ಧಿ ನೆಲಕ್ಕೆ ಬೀಳುವಂತೆ ಮಾಡಿದ್ದನ್ನಂತೂ ಮರೆಯಲು ಸಾಧ್ಯವೇ ಇಲ್ಲ. ಮೊದಲ ಸುತ್ತಿನಲ್ಲಿ ಉತ್ಸಾಹದಿಂದ ಮೆರೆಯುತ್ತಿದ್ದ ಎದುರಾಳಿ ನಿರುತ್ತರರಾಗಿ ಒಳಗೆ ಸೇರಿದ್ದಾಯಿತು. 'ಸಾಯಿ' ಬಾಗಿಲು ಯುವತಿಯ ತರಬೇತಿಗೆ ತೆರೆದುಕೊಂಡಿತು. ಕೋಚ್‌ಗಳು ಆ ಸ್ಪರ್ಧೆಯಲ್ಲಿ ಯುವತಿಯ ಕಿಚ್ಚು ನೋಡಿಯೇ ಕರಗಿಹೋಗಿದ್ದರು.

ಸ್ವೀಟಿ ಬೂರಾ ಬಾಕ್ಸಿಂಗ್ ಪಯಣದ ಆರಂಭದ ದಿನಗಳು ಹೀಗಿದ್ದವು. ಅದಕ್ಕೂ ತುಸು ಹಿಂದಿನ ದಿನಗಳನ್ನು ನೋಡಿದರೆ, 'ದಂಗಲ್' ಸಿನಿಮಾ ದೃಶ್ಯಗಳು ನೆನಪಿಗೆ ಬಂದಾವು.

ಹರಿಯಾಣದ ಚೌಧರಿ ಚರಣ್ ಸಿಂಗ್ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ, ಉತ್ತಿದ್ದ ಹೊಲದಲ್ಲಿ ತರಬೇತುದಾರ ಬಾಕ್ಸಿಂಗ್ ಪಾಠಗಳನ್ನು ಹೇಳಲು ಕರೆದೊಯ್ಯುತ್ತಿದ್ದರು. ಪಾದಗಳು ಮಣ್ಣಿನಲ್ಲಿ ಹೂತುಹೋಗುತ್ತಿದ್ದವು. ಬಾಕ್ಸಿಂಗ್‌ಗೆ ಅಗತ್ಯವಿದ್ದ ಲೀಲಾಜಾಲವಾದ ದೈಹಿಕ ಚಲನೆ ಅಲ್ಲಿ ಸಾಧ್ಯವಾಗುತ್ತಲೇ ಇರಲಿಲ್ಲ. ಕಾಲುಗಳನ್ನು ಒಂದೆಡೆ ಸರಿಯಾಗಿ ನಿಲ್ಲುವಂತೆ ಮಾಡುವುದೇ ಸವಾಲಾಗಿತ್ತು. ಅಲ್ಲಿಯೂ ಎದುರಾಳಿಗೆ ಪಂಚ್ ಕೊಟ್ಟು, ಅದರಲ್ಲೇ ಸ್ವೀಟಿ ಖುಷಿ ಕಾಣುತ್ತಿದ್ದರು.

'ಸಾಯಿ'ಗೆ ಸೇರಿದ ಮೇಲೆ ಅವರಿಗೆ ಬಾಕ್ಸಿಂಗ್‌ನ ನಿಜ ವ್ಯಾಕರಣ ಅರ್ಥವಾಯಿತು. ಅದರಲ್ಲಿ